ಕೆರೆದುಕೊಳ್ಳುತ್ತಾ, ‘‘ಪಿಡಬ್ಲ್ಯುಡಿ ಮಿನಿಸ್ಟರ್ ಕಡೆಯವರದು ಸಾರ್. ಸೆಕ್ರೇಟರಿ ಸಾಹೇಬರಿಗೆ ಮಿನಿಸ್ಟರ್ ಸಾಹೇಬರು ಮಾತನಾಡಿದ್ದಾರೆ. ಮೊನ್ನೇನೆ ಕಮಿಟ್ಮೆಂಟ್ ಆಯ್ತಲ್ಲ ಸಾರ್. ಟೂ ಎಲ್ ಕೆ ಕವರ್ ಕೊಟ್ಟಿಲ್ಲ ಮೊನ್ನೆ ಸಂಜೆ, ಇದಕ್ಕೆ ಸಂಬಂಧಿಸಿದ್ದೆ. ಫಂಡ್ ರಿಲೀಸ್ ಆದ್ಮೇಲೆ ಬ್ಯಾಲೆನ್ಸ್ ತ್ರೀ ಎಲ್‌ಕೆ ನಿಮ್ಗೆ ಕ್ಲಿಯರ್ ಆಗ್ತದೆ. ಅದುಕ್ಕೆ ನಾನು ರೆಸ್ಪಾನ್ಸಿಬಲ್ ಸಾರ್. ಮತ್ತೆ ಇದರಲ್ಲಿ ನಮ್ಮ ರಿಸ್ಕೇನೂ ಇಲ್ಲ. ವಾಟರ್ ಸಪ್ಲೈ ಡಿಪಾರ್ಟ್‌ಮೆಂಟ್‌ನಿಂದ ಫೈಲು ಕ್ಲಿಯರ್ ಆಗಿ, ಸಿ .ಎಂ. ಅಪ್ರೂವಲ್ ಕೂಡಾ ಆಗಿದೆ. ಡಿಪಿಆರ್‌ಗೆ ಕಳಿಸಿದ್ರೆ ತರ್ಲೆ ಆಗ್ಬೋದು ಇಲ್ಲ ಲೇಟೂ ಆಗಬಹುದು...’ ಸಂಪೂರ್ಣವಾಗಿ ಕಡತದ ಚರಿತ್ರೆಯನ್ನು ತೆಗೆದಿಟ್ಟಿದ್ದ. ‘‘ಫೈಲು ನನ್ನತ್ರ ಇರ್ಲಿ ಪವನ್‌ಕುಮಾರ್. ಒಂದೆರಡು ದಿನ  ನೋಡೋಣ. ಇದರಲ್ಲಿ ನಂಗೆ ಯಾವ ರೀತಿಯಾದ

